ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ದೂರವಾಣಿ ಸಂಖ್ಯೆ: 080-23561944, 23361860 ಫ್ಯಾಕ್ಸ್ ಸಂಖ್ಯೆ:23361852.

ಸಂಖ್ಯೆ: ಪಪೂಶಿಇ/ಪರೀಕ್ಷೆ/ಪ.ಕೇ&ಮೌ.ಕೇ-2015/2015-16. ದಿನಾಂಕ:30-06-2015.

**ಪರೀಕ್ಷಾ ತುರ್ತು**

ಪ್ರಾಂಶುಪಾಲರು,
ರಾಜ್ಯದ ಎಲ್ಲಾ ಪದವಿ ಪೂವ ಕಾಲೇಜುಗಳು.

ಮಾನ್ಯರೆ,

ವಿಷಯ: 2015ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ಪ್ರವೇಶ ಪತ್ರಗಳು (ADMISSION TICKETS) ಮತ್ತು ವಿದ್ಯಾರ್ಥಿಗಳ ಪಟ್ಟಿಯ (NOMINAL ROLL) ಬಗ್ಗೆ.

* * * * *

2015ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಹಾಜರಾಗಲಿರುವ ಆಯಾ ಕಾಲೇಜಿನ ಪುನರಾವರ್ತಿತ ಅಭ್ಯರ್ಥಿಗಳ ಪ್ರವೇಶ ಪತ್ರ ಮತ್ತು ವಿದ್ಯಾರ್ಥಿಗಳ ಪಟ್ಟಿಗಳನ್ನು ಮುದ್ರಿಸಿ ಕಳುಹಿಸಿಕೊಡಲಾಗಿದೆ. ಪ್ರವೇಶ ಪತ್ರಗಳಲ್ಲಿ ಮುದ್ರಿಸಿರುವ ವಿದ್ಯಾರ್ಥಿಗಳ ಹೆಸರು, ವಿದ್ಯಾರ್ಥಿಗಳ ಭಾವಚಿತ್ರ, ಪೋಷಕರ ಹೆಸರು, ಪರೀಕ್ಷೆಗೆ ಹಾಜರಾಗಲಿರುವ ವಿಷಯಗಳು, ಕಾಲೇಜು ಮತ್ತು ಪರೀಕ್ಷಾ ಕೇಂದ್ರ ವಿಳಾಸ ಇವುಗಳನ್ನು ಪ್ರಾಂಶುಪಾಲರೇ ಖುದ್ದಾಗಿ ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು. ವಿದ್ಯಾರ್ಥಿಗಳ ಭಾವಚಿತ್ರ ಪ್ರವೇಶಪತ್ರದಲ್ಲಿ ಮುದ್ರಿತವಾಗಿಲ್ಲದಲ್ಲಿ ಅಂತಹ ಪ್ರವೇಶ ಪತ್ರಗಳಿಗೆ ವಿದ್ಯಾರ್ಥಿಯ ಭಾವಚಿತ್ರ ಅಂತಿಸಿ ಪ್ರಾಂಶುಪಾಲರು ಮೊಹರನ್ನು ಹಾಕಿ ಸಹಿಮಾಡಿ ದೃಢೀಕರಿಸುವುದು ಪ್ರಾಂಶುಪಾಲರು ಪ್ಯಾಸಿಮಲ್ ಸಹಿಯನ್ನು ಹಾಕಬಾರದು. ವಿದ್ಯಾರ್ಥಿಯ ಸಹಿ ಇಲ್ಲದಿದ್ದಲ್ಲಿ ಸಹಿ ಪಡೆದ ನಂತರ ವಿತರಿಸತಕ್ಕದಗದು.

ವಿ.ಸೂ: ಪ್ರಾಂಶುಪಾಲರು ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಪರಿಶೀಲಿಸಿ ವಿಳಂಬ ಮಾಡದೆ ಈ ಕೂಡಲೇ ವಿದ್ಯಾರ್ಥಿಗಳಿಗೆ ವಿತರಿಸತಕ್ಕದ್ದು.

## ೦. ಪ್ರವೇಶ ಪತ್ರಗಳನ್ನು ವಿತರಿಸುವಾಗ ಪ್ರಾಂಶುಪಾಲರು ಗಮನಿಸಬೇಕಾದ ಅಂಶಗಳು:

1. ವಿದ್ಯಾರ್ಥಿಗಳ ಹೆಸರು, ಭಾವಚಿತ್ರ, ಪೋಷಕರ ಹೆಸರು, ಪರೀಕ್ಷೆಗೆ ಹಾಜರಾಗಲಿರುವ ವಿಷಯಗಳು, ಕಾಲೇಜು ಮತ್ತು ಪರೀಕ್ಷಾ ಕೇಂದ್ರ ಇವುಗಳನ್ನು ತಮ್ಮಲ್ಲಿರುವ ದಾಖಲೆಗಳೊಂದಿಗೆ ಪರಿಶೀಲಿಸಿದ ನಂತರವೇ ಪ್ರವೇಶ ಪತ್ರಗಳನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ವಿತರಿಸುವುದು.

2. OMR ಅರ್ಜಿಯಲ್ಲಿ ಭರ್ತಿ ಮಾಡಲಾದ ಮಾಹಿತಿಗಳ ಆಧಾರದ ಮೇಲೆ ಮತ್ತು Fee List ನಲ್ಲಿ ಮಾಡಲಾಗಿರುವ ತಿದ್ದುಪಡಿಗಳನ್ನು Update ಮಾಡಿ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಮುದ್ರಿಸಿ ಕಳುಹಿಸಿಕೊಡಲಾಗಿದೆ. ಪ್ರವೇಶ ಪತ್ರಗಳನ್ನು ವಿತರಿಸುವಾಗ ಹೆಸರು ಮತ್ತು ಹಾಜರಾಗಲಿರುವ ವಿಷಯಗಳ ಬಗ್ಗೆ ಗಮನಹರಿಸಿ ನೋಡಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ತಿಳಿಸುವುದು. ಒಂದು ವೇಳೆ ಸಣ್ಣಪುಟ್ಟ ತಿದ್ದುಪಡಿಗಳು ಕಂಡುಬಂದಲ್ಲಿ ಪೂರಕ ದಾಖಲೆಗಳ ಆಧಾರದ ಮೇಲೆ ಪ್ರಾಂಶುಪಾಲರೇ ತಿದ್ದುಪಡಿ ಮಾಡಿ ಕೊಡುವುದು. ತಿದ್ದುಪಡಿಗಾಗಿ ವಿದ್ಯಾರ್ಥಿಗಳನ್ನು/ಪೋಷಕರನ್ನು ಕೇಂದ್ರ ಕಛೇರಿಗೆ ಕಳುಹಿಸಬಾರದು. ತದನಂತರ ತಿದ್ದುಪಡಿಗಳನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರ ಗಮನಕ್ಕೆ ತಂದು ಈ ತಿದ್ದುಪಡಿಯನ್ನು ಅಭ್ಯರ್ಥಿಯ ಪಟ್ಟಿಯಲ್ಲಿಯೂ (Nominal Roll) ದಾಖಲಿಸಿರುವುದನ್ನು ತಾವೇ ಖುದ್ದು ಖಾತರಿ ಪಡಿಸಿಕೊಂಡು ತಿದ್ದುಪಡಿ ಮಾಡಿದ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿರುವ **ನಮೂನೆ-29 (PUX-29)** ರಲ್ಲಿ ಭರ್ತಿಮಾಡಿ ದಿ: **06-07-2015**ರ ಒಳಗೆ **ಶ್ರೀ ಸುರೇಶ, ಸಹಾಯಕ ನಿರ್ದೇಶಕರು (ಪರೀಕ್ಷೆ)** ಇವರಿಗೆ ಖುದ್ದಾಗಿ ಸಲ್ಲಿಸುವುದು. ತಿದ್ದುಪಡಿ ಪಟ್ಟಿಯನ್ನು ತದನಂತರ ಕಳುಹಿಸಿಕೊಟ್ಟಲ್ಲಿ ಅಂತಹ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರ ವಿರುದ್ಧ KCS (CCA) ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿದ್ದಲ್ಲಿ 2006ರ ನಿಯಮಗಳು ದಿನಾಂಕ 07-07-2007 ರನ್ವಯ ಕ್ರಮ ಜರುಗಿಸಲಾಗುವುದು. ತಿದ್ದುಪಡಿ ಮಾಡಿದ ಮೂಲ ಪ್ರವೇಶಪತ್ರವನ್ನು ಇಲಾಖೆಗೆ ಕಳುಹಿಸಬಾರದು.

3. ಒಂದು ವೇಳೆ ಪ್ರವೇಶ ಪತ್ರಗಳಲ್ಲಿ ವಿದ್ಯಾರ್ಥಿಗಳ ಭಾವಚಿತ್ರಗಳು ಮತ್ತು ಸಹಿಗಳು ಮುದ್ರಿತವಾಗದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಯ ಮೂರು ಭಾವಚಿತ್ರಗಳನ್ನು ಪಡೆದುಕೊಳ್ಳುವುದು. ಮೂಲ ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವುದಕ್ಕೆ ಮೊದಲು ಪ್ರವೇಶ ಪತ್ರಕ್ಕೆ ಒಂದು ಫೋಟೋವನ್ನು ಅಂಟಿಸಿ, ವಿದ್ಯಾರ್ಥಿಗಳ ಸಹಿ ಮಾಡಿಸಿದ ನಂತರ ಪ್ರಾಂಶುಪಾಲರು ಭಾವಚಿತ್ರವನ್ನು ದೃಢೀಕರಿಸಿ ಸಹಿ ಮಾಡಿ ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವುದು. ಉಳಿದ ಎರಡು ಫೋಟೋಗಳನ್ನು ಆಲ್ಬಂ ರೂಪದಲ್ಲಿ ತಯಾರಿಸಿ ಒಂದನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಪರೀಕ್ಷೆ ಪ್ರಾರಂಭವಾಗುವ ಮೊದಲು ಕಳುಹಿಸಿಕೊಡಬೇಕು ಮತ್ತೊಂದು ಆಲ್ಬಂನ್ನು ಪರಿಶೀಲನೆಗಾಗಿ ಕಛೇರಿಯಲ್ಲಿಯೇ ಉಳಿಸಿಕೊಳ್ಳುವುದು.

4. ಪ್ರವೇಶ ಪತ್ರಗಳಲ್ಲಿ ವಿದ್ಯಾರ್ಥಿಗಳ ಭಾವಚಿತ್ರಗಳು ಅಪೂರ್ಣವಾಗಿ ಮುದ್ರಣವಾಗಿದ್ದರೆ ಅಂತಹ ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವ ಮೊದಲು ಮೇಲಿನ ಕ್ರಮ ಸಂಖ್ಯೆ (2)ರಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳುವುದು.

5. ಒಂದೇ ಹೆಸರಿನ ಹಲವು ವಿದ್ಯಾರ್ಥಿಗಳಿದ್ದಲ್ಲಿ ಪ್ರವೇಶ ಪತ್ರಗಳನ್ನು ವಿತರಿಸುವ ಮುನ್ನ ತಂದೆ ಹೆಸರು, ತಾಯಿಯ ಹೆಸರು ದಾಖಲಾತಿ ವಹಿಯಲ್ಲಿರುವ ವಿವರಗಳನ್ನು ಪರಿಶೀಲಿಸಿ ಎಚ್ಚರಿಕೆವಹಿಸಿ ಸರಿಯಾದ ವಿದ್ಯಾರ್ಥಿಗೆ ಸರಿಯಾದ ಪ್ರವೇಶ ಪತ್ರವನ್ನು ವಿತರಿಸಬೇಕು. ಇದರಲ್ಲಿ ವ್ಯತ್ಯಾಸವಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ.

6. **ಅರ್ಹ ವಿದ್ಯಾರ್ಥಿಗೆ ಪ್ರವೇಶ ಪತ್ರ ಬಾರದಿರುವ ಬಗ್ಗೆ :**

a) ಪರೀಕ್ಷಾ ಶುಲ್ಕ ಕಟ್ಟಿದ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ಬಾರದಿದ್ದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಅಂತಹ ವಿದ್ಯಾರ್ಥಿಗಳ ವಿವರಗಳನ್ನು ಪೂರಕ ದಾಖಲೆಗಳೊಂದಿಗೆ ಕುಲಂಕಷವಾಗಿ ಪರಿಶೀಲಿಸಿ **ಶ್ರೀ ಸುರೇಶ, ಸಹಾಯಕ ನಿರ್ದೇಶಕರು (ಪರೀಕ್ಷೆ) ಇವರಿಗೆ ಕೂಡಲೇ ಖುದ್ದಾಗಿ ಸಲ್ಲಿಸಿ** ಪ್ರವೇಶ ಪತ್ರವನ್ನು ಪಡೆದುಕೊಳ್ಳುವುದು. ತಪ್ಪು ಮಾಹಿತಿ ನೀಡಿದಲ್ಲಿ ಪ್ರವೇಶಪತ್ರವನ್ನು ನೀಡಲಾಗುವುದಿಲ್ಲ. ಇದರಿಂದ ಮುಂದೆ ಸಂಭವಿಸಬಹುದಾದ ಆಗುಹೋಗುಗಳಿಗೆ ಪ್ರಾಂಶುಪಾಲರೇ ಹೊಣೆಗಾರರಾಗುತ್ತಾರೆ.

b) 2015ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಯ ಮರುಮೌಲ್ಯಮಾಪನದ ನಂತರ ಅನುತ್ತೀರ್ಣರಾದ ವಿದ್ಯಾರ್ಥಿಗಳು / ತಡೆಹಿಡಿದ ಫಲಿತಾಂಶ ಘೋಷಣೆಯನಂತರ ಅನುತ್ತೀರ್ಣರಾದ ವಿದ್ಯಾಥಿಗಳು / 2015ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಸಕಾಲದಲ್ಲಿ ಪರೀಕ್ಷಾ ಶುಲ್ಕ ಪಾವಿತಿಸಿ, ಕಾಲೇಜಿನಿಂದ ಅರ್ಜಿ ಸಲ್ಲಿಸಿದ್ದರೂ ಸಹ ಪ್ರವೇಶಪತ್ರ ಬಾರದ ವಿದ್ಯಾರ್ಥಿಗಳಿಗೆ 2015ರ ಪೂರಕ ಪರೀಕ್ಷೆ ಬರೆಯಲು ಇಚ್ಛಿಸಿದ್ದಲ್ಲಿ ಈ ಕೆಳಗಿನಂತೆ ಕ್ರಮ ವಹಿಸುವುದು:

i. ಅನುತ್ತೀರ್ಣರಾದ ವಿದ್ಯಾರ್ಥಿಯ / ತಡೆಹಿಡಿದ ಫಲಿತಾಂಶ ಘೋಷಣೆಯನಂತರ ಅನುತ್ತೀರ್ಣರಾದ ವಿದ್ಯಾಥಿಯ 2015ರ ವಾರ್ಷಿಕ ಪರೀಕ್ಷೆಯ ಘೋಷಿತ ಫಲಿತಾಂಶ / ಮರುಮೌಲ್ಯಮಾಪನದ ಫಲಿತಾಂಶವನ್ನು ಕುಲಂಕುಶವಾಗಿ ಪರಿಶೀಲಿಸಿ, ಅರ್ಹ ವಿದ್ಯಾರ್ಥಿಯಾಗಿದ್ದಲ್ಲಿ 'ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ' ಶುಲ್ಕ ಪಡೆದು, ಸದರಿ ಮಾಹಿತಿಯನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ನೀಡಿ ಪರೀಕ್ಷೆಗೆ ಹಾಜರಾಗಲು ಅನುಮತಿಸುವುದು.

ii. 2015ರ ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಯು ಸಕಾಲದಲ್ಲಿ ಪರೀಕ್ಷಾ ಶುಲ್ಕ ಪಾವಿತಿಸಿ, ಕಾಲೇಜಿನಿಂದ ಅರ್ಜಿ ಸಲ್ಲಿಸಿದ್ದರೂ ಸಹ ಪ್ರವೇಶಪತ್ರ ಬಾರದ ವಿದ್ಯಾರ್ಥಿಗಳ ಪೂರಕ ದಾಖಲೆಗಳನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ನೀಡಿ ಪರೀಕ್ಷೆಗೆ ಹಾಜರಾಗಲು ಅನುಮತಿಸುವುದು.

iii. ಪರೀಕ್ಷಾ ಕೇಂದ್ರದ ಮುಖ್ಯಧೀಕ್ಷಕರು ಇಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಕೊಡುತ್ತಾ, ವಿದ್ಯಾರ್ಥಿ ವ್ಯಾಸಂಗ ಮಾಡಿದ ಪ್ರಾಂಶುಪಾಲರ ಮುಖಾಂತರ ಪರೀಕ್ಷೆ ನಡೆಯುತ್ತಿರುವ ಅವಧಿಯಲ್ಲಿಯೇ ಅಂದರೆ ಬೆಳಿಗ್ಗೆ 09:00 ರಿಂ 12:15 ಗಂಟೆ / ಮದ್ಯಾಹ್ನ 02:00 ರಿಂದ 05:15 ಕೆಳಗೆ ತಿಳಿಸಿರುವ ಕೇಂದ್ರ ಕಛೇರಯ ಅಧಿಕಾರಿಗಳನ್ನು ದೂರವಾಣಿಯಲ್ಲಿ ಸಂಪರ್ಕಿಸಿ ಅನುಭಂದದಲ್ಲಿ ತಿಳಿಸಿರುವ ಮಾಹಿತಿಯನ್ನು ನೀಡುವುದು ಹಾಗೂ ಪರೀಕ್ಷಾ ಅವಧಿ ಮುಗಿಯುವುದರೊಳವೆ ವಿದ್ಯಾರ್ಥಿಯ ನೋಂದಣಿ ಸಂಖ್ಯೆ ಪಡೆದು ಉತ್ತರಪತ್ರಿಕೆಯಲ್ಲಿ ನಮೂದಿಸುವುದು. ಅನುಭಂದವನ್ನು ಕೇಂದ್ರ ಕಛೇರಿಗೆ ಫ್ಯಾಕ್ಸ್ ಮಾಡುವುದರೊಂದಿಗೆ ಅಂಚೆ ಮೂಲಕ ಸಹ ಕಳುಹಿಸಕೊಡುವುದು.

**7. ಪ್ರವೇಶ ಪತ್ರಗಳನ್ನು ಕಳೆದುಕೊಂಡಾಗ ತೆಗೆದುಕೊಳ್ಳಬೇಕಾದ ಕ್ರಮ :**

ವಿದ್ಯಾರ್ಥಿಗಳು ಮೂಲ ಪ್ರವೇಶ ಪತ್ರಗಳನ್ನು ಕಳೆದುಕೊಂಡಲ್ಲಿ ವಿದ್ಯಾರ್ಥಿಯು ಯಾವುದೇ ಪರೀಕ್ಷಾ ದುರಾಚರಣೆ ಇತ್ಯಾದಿಗಳಲ್ಲಿ ಸಿಲುಕದಿರುವುದನ್ನು ಖಚಿತಪಡಿಸಿಕೊಂಡು ಅವರಿಗೆ ದ್ವಿಪ್ರತಿ ಪ್ರವೇಶ ಪತ್ರವನ್ನು ನೀಡಲು ಪ್ರಾಂಶುಪಾಲರಿಗೆ ಅಧಿಕಾರ ನೀಡಲಾಗಿದೆ. ಮೂಲ ಪ್ರವೇಶ ಪತ್ರದ ಮಾದರಿಯಲ್ಲೇ ದ್ವಿಪ್ರತಿ ಪ್ರವೇಶ ಪತ್ರವನ್ನು ಸಿದ್ಧಪಡಿಸಿ ಅದರಲ್ಲಿ ವಿದ್ಯಾರ್ಥಿಯ ಇತ್ತೀಚಿನ ಭಾವಚಿತ್ರವನ್ನು ಅಂಟಿಸಿ ಪ್ರಾಂಶುಪಾಲರೇ ದೃಢೀಕರಿಸಿ ವಿತರಿಸುವುದು. ದ್ವಿಪ್ರತಿ ಪ್ರವೇಶ ಪತ್ರ ನೀಡಿಕೆ ಶುಲ್ಕವಾಗಿ ₹.120-00ನ್ನು ಪ್ರತಿ ಅಭ್ಯರ್ಥಿಯಿಂದ ಪಡೆದು ಸಂಬಂಧಿಸಿದ ವಿವರಗಳೊಂದಿಗೆ ಚಲನ್ ಮೂಲಕ ಪಾವತಿಸಿ ನಿರ್ದೇಶನಾಲಯಕ್ಕೆ ಕಳುಹಿಸುವುದು.

**8. ಅಭ್ಯರ್ಥಿಗಳ ಪಟ್ಟಿ ಬಗ್ಗೆ:**

(ಅ) ಕಾಲೇಜುವಾರು ಪಟ್ಟಿ:

- ಕಾಲೇಜುವಾರು ಅಭ್ಯರ್ಥಿಪಟ್ಟಿಯನ್ನು ಪ್ರತ್ಯೇಕವಾಗಿ ಪ್ರವೇಶ ಪತ್ರಗಳೊಂದಿಗೆ ಕಳುಹಿಸಲಾಗಿದೆ.

(ಆ) ಕೇಂದ್ರವಾರು ಪಟ್ಟಿ

ಪ್ರತಿ ಪರೀಕ್ಷಾ ಕೇಂದ್ರಕ್ಕೆ ಲಗತ್ತಿಸಲಾದ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳನ್ನೊಳಗೊಂಡಂತೆ ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳ **ಅಭ್ಯರ್ಥಿಗಳ ಪಟ್ಟಿಯನ್ನು (Examination Centre Students' Nominal Roll)** ದ್ವಿಪ್ರತಿಯಲ್ಲಿ ಮುದ್ರಿಸಿ ಕಳುಹಿಸಿಕೊಡಲಾಗಿದೆ. ವಿದ್ಯಾರ್ಥಿಗಳ ಗೈರುಹಾಜರಿ, ಪರೀಕ್ಷಾ ದುರಾಚರಣೆ, ಸಣ್ಣಪುಟ್ಟ ತಿದ್ದುಪಡಿಗಳಿದ್ದಲ್ಲಿ ಈ ಪಟ್ಟಿಯಲ್ಲಿಯೇ ಕಡ್ಡಾಯವಾಗಿ ಕೆಂಪುಶಾಹಿಯಿಂದ ಗುರುತು ಮಾಡಿ ಅದರ ಮೂಲಪಟ್ಟಿಯನ್ನು ಎಲ್ಲಾ ಪರೀಕ್ಷೆಗಳು ಮುಗಿದ ಮರುದಿನವೇ **ಸಹಾಯಕ ನಿರ್ದೇಶಕರು** (ಪರೀಕ್ಷೆ) ಇವರ ವಿಳಾಸಕ್ಕೆ ಕಳುಹಿಸಿಕೊಡುವುದು.

**ವಿಶೇಷ ಸೂಚನೆ :**

1) ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಉಪನ್ಯಾಸಕರಾಗಲಿ, ಬೋಧಕೇತರ ಸಿಬ್ಬಂದಿಯವರಾಗಲಿ, ವಿದ್ಯಾರ್ಥಿಗಳಾಗಲಿ ಮೊಬೈಲ್‌ಫೋನ್, ಇ-ಕ್ಯಾಮರ, ಲ್ಯಾಪ್ ಟಾಪ್ ಇತ್ಯಾದಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಗಳಲ್ಲಿ ಹೊಂದಿರಬಾರದು. ಈ ಕುರಿತಂತೆ ಉಪನ್ಯಾಸಕರಿಗೆ, ಸಿಬ್ಬಂದಿಗೆ ಮತ್ತು ವಿದ್ಯಾರ್ಥಿಗಳಿಗೆ ಕಟ್ಟುನಿಟ್ಟಾಗಿ ಸೂಚನೆ ನೀಡತಕ್ಕದ್ದು.

2) ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಯಾರಾದರೂ ಮೊಬೈಲ್‌ಫೋನ್, ಇ-ಕ್ಯಾಮರ, ಲ್ಯಾಪ್ ಟಾಪ್ ಇತ್ಯಾದಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಹೊಂದಿದ್ದಲ್ಲಿ ಅವುಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದು.

**3) ಫಲಿತಾಂಶ ತಿರಸ್ಕರಣೆ ಶುಲ್ಕವನ್ನು ಪಾವತಿಸದಿದ್ದರೂ, ಫಲಿತಾಂಶ ತಿರಸ್ಕರಣೆಯಿಂದ ಆ ಭಾಗದಲ್ಲಿನ ವಿಷಯದಲ್ಲಿ 35ಕ್ಕಿಂತ ಕಡಿಮೆ ಅಂಕಗಳಿಸಿದ ವಿಷಯಕ್ಕೆ ಕಡ್ಡಾಯವಾಗಿ ಪರೀಕ್ಷೆಗೆ ಹಾಜರಾಗಬೇಕಾಗಿರುವುದರಿಂದ ಆ ವಿಷಯದ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗುವಂತೆ ಪ್ರವೇಶ ಪತ್ರದಲ್ಲಿ ಮುದ್ರಿಸಿ ಕಳುಹಿಸಲಾಗಿದೆ. ಈ ಬಗ್ಗೆ ಸದರಿ ವಿದ್ಯಾರ್ಥಿಗೆ ಮಾಹಿತಿಯನ್ನು ನೀಡಿ ಶುಲ್ಕಗಳನ್ನು ಪಡೆದು ಪರೀಕ್ಷೆಗೆ ಹಾಜರಾಗುವಂತೆ ತಿಳಿಸುವುದು.**

4) ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ ಒಂದು ಭಾಷಾ ವಿಷಯಕ್ಕೆ ಪರೀಕ್ಷೆಯಿಂದ ವಿನಾಯತಿ ನೀಡಲಾಗಿರುತ್ತದೆ. ಆದ್ದರಿಂದ ವಿಕಲಚೇತನ ವಿದ್ಯಾರ್ಥಿಗಳ ಪ್ರವೇಶಪತ್ರಗಳಲ್ಲಿ ಆ ಭಾಷೆಗೆ **EXEMPTED** ಎಂದು ಮುದ್ರಿಸಲಾಗಿದೆ.

Sd/-

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ ಮಾಹಿತಿಗಾಗಿ :
ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ.

# PUX-29 – ನಮೂನೆ 29

## 2015ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪ್ರವೇಶ ಪತ್ರ ಮತ್ತು ನಾಮಿನಲ್ ರೋಲ್‌ಗಳಲಿ ತಿದ್ದುಪಡಿ ವಿವರ

| ಕ್ರಮ ಸಂಖ್ಯೆ | ನೋಂದಣಿ ಸಂಖ್ಯೆ | ಪ್ರವೇಶ ಪತ್ರದಲ್ಲಿ ತಪ್ಪಾಗಿ ಮುದ್ರಿತವಾಗಿರುವ ವಿದ್ಯಾರ್ಥಿಯ / ತಂದೆಯ / ತಾಯಿಯ ಹೆಸರು | ತಿದ್ದುಪಡಿಯಾಗ ಬೇಕಾದ ವಿದ್ಯಾರ್ಥಿಯ / ತಂದೆಯ / ತಾಯಿಯ ಹೆಸರು | ಪ್ರವೇಶಪತ್ರದಲ್ಲಿ ತಪ್ಪಾಗಿ ಮುದ್ರಿತವಾಗಿರುವ ವಿಷಯಗಳು ಮತ್ತು ವಿಷಯ ಸಂಕೇತ ಸಂಖ್ಯೆ | ತಿದ್ದುಪಡಿಯಾಗಬೇಕಾದ ವಿಷಯಗಳು ಮತ್ತು ವಿಷಯ ಸಂಕೇತ ಸಂಖ್ಯೆ |
|---|---|---|---|---|---|
| 1. | | | | | |
| 2. | | | | | |
| 3. | | | | | |
| 4. | | | | | |
| 5. | | | | | |
| 6. | | | | | |
| 7. | | | | | |
| 8. | | | | | |
| 9. | | | | | |
| 10. | | | | | |
| 11. | | | | | |
| 12. | | | | | |
| 13. | | | | | |
| 14. | | | | | |
| 15. | | | | | |
| 16. | | | | | |
| 17. | | | | | |
| 18. | | | | | |
| 19. | | | | | |
| 20. | | | | | |

ಪ್ರಾಂಶುಪಾಲರ ಸಹಿ ಮತ್ತು ಮೊಹರು

ಅನುಭಂದ

(ಪಪೂಶಿಇ/ಪರೀಕ್ಷೆ/ಪ.ಕೇ&ಮೌ.ಕೇ–2015/2015–16. ದಿನಾಂಕ: –06–2015, ಅಂಕಣ–6(b)ರ ಅನ್ವಯ)

**2015ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಹಾಜರಾಗಲು ಅರ್ಹ ವಿದ್ಯಾರ್ಥಿಗೆ ನೋಂದಣಿ ಸಂಖ್ಯೆ ಕೋರಿ:**

<table>
<tr><th>Sl. No.</th><th>Information</th><th colspan="2">Details</th></tr>
<tr><td>1.</td><td>Student Name</td><td colspan="2"></td></tr>
<tr><td>2.</td><td>Father's Name</td><td colspan="2"></td></tr>
<tr><td>3.</td><td>Mother's Name</td><td colspan="2"></td></tr>
<tr><td>4.</td><td>College Name</td><td colspan="2"></td></tr>
<tr><td>5.</td><td>College Code</td><td colspan="2"></td></tr>
<tr><td>6.</td><td>2015 March Register No.</td><td colspan="2"></td></tr>
<tr><td rowspan="7">7.</td><td rowspan="7">Subjects Offered</td><td>Sub Code</td><td>Sub Name</td></tr>
<tr><td></td><td></td></tr>
<tr><td></td><td></td></tr>
<tr><td></td><td></td></tr>
<tr><td></td><td></td></tr>
<tr><td></td><td></td></tr>
<tr><td></td><td></td></tr>
<tr><td>8.</td><td>Reason for Late submission</td><td colspan="2"></td></tr>
<tr><td colspan="4">2015 Supplementary Examination Details</td></tr>
<tr><td>9.</td><td>Examination Centre Name</td><td colspan="2"></td></tr>
<tr><td>10.</td><td>Examination Centre Code</td><td colspan="2">XC -</td></tr>
<tr><td rowspan="7">11.</td><td rowspan="7">Subjects offering</td><td>Sub Code</td><td>Sub Name</td></tr>
<tr><td></td><td></td></tr>
<tr><td></td><td></td></tr>
<tr><td></td><td></td></tr>
<tr><td></td><td></td></tr>
<tr><td></td><td></td></tr>
<tr><td></td><td></td></tr>
</table>

Date :
Place :

College Principal's Signature
College seal

Examination Centre's Chief Superintendent.